ಅ) ಇವುಗಳ ಪೈಕಿ ಎಷ್ಟು ಬಾವಿಗಳಿಗೆ ೧೯೮೫-೮೬ನೇ ಸಾಲಿನಲ್ಲಿ ವಿದ್ಯುಚ್ಛಕ್ತಿ ಒದಗಿಸಲಾಗಿದೆ?

ಇ) ಉಳಿದ ಬಾವಿಗಳ ಸಂಖ್ಯೆ ಎಷ್ಟು ?

ಈ) ಈ ಬಾವಿಗಳಿಗೆ ವಿದ್ಯುಚ್ಛಕ್ತಿ ಒದಗಿಸದಿರಲು ಕಾರಣವೇನು ?

ಶ್ರೀ ಜೆ. ಹೆಚ್. ಪಟೀಲ್ (ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು).—

ಅ) ೪೭೨ ಅರ್ಜಿಗಳು. ಇವುಗಳಲ್ಲದೆ ಕಳೆದ ಸಾಲಿನಲ್ಲಿ ಬಂದ ಅರ್ಜಿಗಳ ಪೈಕಿ ೧೧೫ ಬಾಕಿ ಉಳಿದಿದ್ದುವು.

ಆ) ೪೭೨ ಪಂಪುಸೆಟ್ಟುಗಳ ಪೈಕಿ ೩೮೭ ಕ್ಕೆ ವಿದ್ಯುತ್ ಒದಗಿಸಲಾಯಿತು ಬಾಕಿ ಉಳಿದಿದ್ದ ಅರ್ಜಿಗಳ ಪೈಕಿ೭೨ ಅರ್ಜಿದಾರರಿಗೆ ವಿದ್ಯುತ್ ಒದಗಿಸಲಾಯಿತು. ಉಳಿದ ೪೩ ಅರ್ಜಿದಾರರು ಮುಂಡಳಿ ನಿಯಮ ಪರಿಪಾಲಿಸಲಿಲ್ಲ ಒಟ್ಟು ೪೫೯ ಅರ್ಜಿದಾರರಿಗೆ ವಿದ್ಯುತ್ ಒದಗಿಸಿದೆ.

ಇ) ೮೫ ಅರ್ಜಿಗಳು

ಈ) ಈ ಸಾಲಿನಲ್ಲಿ ವಾರ್ಷಿಕ ಗುರಿ ೪೫೦ ಇದ್ದು ಪ್ರಗತಿ ೪೫೯. ಬಂದ ಅರ್ಜಿಗಳ ಸಂಖ್ಯೆ ಗುರಿಗಿಂತ ಅಧಿಕವಾದ್ದರಿಂದ ಬಾಕಿ ಉಳಿಯಿತು.

ಬಳ್ಳಾರಿ ತಾಲ್ಲೂಕಿನಲ್ಲಿ ಸ್ವಯಂ ಉದ್ಯೋಗ ಯೋಜನೆಯಡಿಯಲ್ಲಿ ಸಾಲ ಮಂಜೂರಾತಿ ಬಗ್ಗೆ

೭೧೨೨. ಶ್ರೀ ಶಿವರಾಮ ರೆಡ್ಡಿ (ಕುರುಗೋಡು).—ಮಾನ್ಯ ಕೈಗಾರಿಕೆ ಮಂತ್ರಿ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ತಾಲ್ಲೂಕಿನಲ್ಲಿ ಸ್ವಯಂ ಉದ್ಯೋಗದ ಅಡಿಯಲ್ಲಿ ಎಷ್ಟು ಜನರಿಗೆ ಬ್ಯಾಂಕುಗಳಿಂದ ಸಾಲ ಕೊಡಿಸಲಾಗಿದೆ ?

ಆ) ಯಾವ ಯಾವ ಉದ್ಯೋಗಕ್ಕಾಗಿ ಕೊಡಿಸಲಾಗಿದೆ ಹಾಗೂ ಅದರ ಒಟ್ಟಿಗೆ ವೆಚ್ಚವೆಷ?

ಇ) ಇದರಲ್ಲಿ ಪಟ್ಟಣದಲ್ಲಿ ಇರುವವರಿಗೆ ಎಷ್ಟು ಜನಕ್ಕೆ ಹಾಗೂ ಹಳ್ಳಿಯಲ್ಲಿರುವವರಿಗೆ ಎಷ್ಟು ಜನಕ್ಕೆ ಸಾಲ ನೀಡಲಾಗಿದೆ ?

ಈ) ಇದರಲ್ಲಿ ಬ್ಯಾಂಕಿನವರು ತಿರಸ್ಕರಿಸಿದ ಅರ್ಜಿಗಳು ಎಷ್ಟು ?

ಶ್ರೀ ಜೆ. ಹೆಚ್. ಪಟೀಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ೨೩೦ ಅಭ್ಯರ್ಥಿಗಳಿಗೆ ಸಾಲ ಮಂಜೂರಾತಿ ಮಾಡಲಾಗಿದೆ.

ಆ) ಕೈಗಾರಿಕೆ, ಸೇವೆ, ವ್ಯಾಪಾರಗಳನ್ನು ನಡೆಸಲು ಸಾಲವನ್ನು ಕೊಡಲಾಗಿದೆ. ಅವುಗಳ ಒಟ್ಟು ಮೊತ್ತ ರೂ. ೨೧.೦೪ ಲಕ್ಷಗಳು.

ಇ) ಸಾಲವನ್ನು ಪಡೆದವರಲ್ಲಿ ೨೧೦ ಅಭ್ಯರ್ಥಿಗಳು ಪಟ್ಟಣವಾಸಿಗಳಾಗಿರುವವರು ಮತ್ತು ೨೦ ಮಂದಿ ಹಳ್ಳಿಯಲ್ಲಿ ವಾಸವಾಗಿರುವವರು.

ಈ) ಇದಂವರೆವಿಗೂ ಬ್ಯಾಂಕಿನವರು ೨೦ ಅರ್ಜಿಗಳನ್ನು ತಿರಸ್ಕರಿಸಿರುವರು.

ಧಾರವಾಡ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಇನ್ನೂ ತೆರೆಯಬೇಕಾಗಿರುವ ಪಶು ಚಿಕಿತ್ಸಾಲಯಂಗಳ

ವಿವರಗಳು

ಕ್ರ. ಸಂಖ್ಯೆ.	ತಾಲ್ಲೂಕು	ಜಾನುವಾರುಗಳ ಸಂಖ್ಯೆ	ಕೋಳಿಗಳ ಸಂಖ್ಯೆ	ದನಗಳ ಘಟಕಗಳು	ಬೇಕಾಗಿರುವ ಪಶುವೈದ್ಯರ ಪೋಲಿಗಳ ಸಂಖ್ಯೆ	ಈಗಿರುವ ಓಟ್ಟು ಪಶು ವೈದ್ಯ ಪೋಲಿಗಳು	ತೆರೆಯಬೇಕಾಗಿರುವ ಪಶು ವೈದ್ಯ ಪೋಲಿಗಳ ಸಂಖ್ಯೆ
೧	ಧಾರವಾಡ	೧೧೯೮೩	೩೧೪೧೨	೯೯೧೫೩	೧೩	೫	೮
೨	ಹುಬ್ಬಳ್ಳಿ	೧೮೯೫೧೧	೪೮೭೩೪	೮೯೯೫೪	೧೨	೪	೮
೩	ಗದಗ	೧೨೬೦೪೮	೨೧೧೩೫	೭೫೩೩೫	೧೦	೬	೪
೪	ಹಾವೇರಿ	೧೦೯೩೧೬	೪೫೩೩೩	೫೯೪೫೯	೮	೬	೨
೫	ಕಲಘಟಗಿ	೭೫೯೩೩	೧೩೯೯೩	೬೫೩೩೮	೯	೫	೪
೬	ಶಿಗ್ಗಾವಿ	೬೭೧೫೪	೧೪೪೧೭	೫೫೪೪೭೫	೭	೪	೩
೭	ಹಾನಗಲ್	೧೨೦೯೫೯	೩೩೬೯೯	೯೭೨೭೬	೧೨	೬	೬
೮	ಬ್ಯಾಡಗಿ	೬೫೯೨೦	೧೫೪೬೨	೪೭೭೩೪	೬	೪	೨
೯	ಹಿರೇಕೆರೂರ	೧೨೭೮೫೦	೨೯೪೭೫	೮೮೪೯೦	೧೨	೯	೩
೧೦	ರಾಣೆಬೆನ್ನೂರು	೧೪೯೪೧೫	೨೪೫೮೬	೮೧೬೫೯	೧೧	೧೧	–
೧೧	ಶಿರಹಟ್ಟಿ	೧೦೦೪೭೧	೧೧೨೧೮	೫೬೯೦೮	೭	೫	೨
೧೨	ಮುಂಡರಗಿ	೮೪೬೨೧	೯೨೬೫	೪೬೬೧೭	೬	೭	–
೧೩	ನರಗುಂದ	೫೨೪೮೬	೫೦೧೫	೩೧೭೧೩	೪	೪	–
೧೪	ಸವಣೂರು	೬೨೩೮೭	೧೨೬೦೦	೪೩೪೧೭	೬	೩	೩
೧೫	ನವಲಗುಂದ	೮೧೭೬೩	೭೮೯೩	೪೯೬೫೫೭	೭	೬	೧
೧೬	ರೋಣ	೧೩೫೬೬೫	೨೮೫೨೯	೭೩೦೭೨	೧೦	೯	೧
೧೭	ಕುಂದಗೊಳ	೬೧೫೪೦	೯೧೭೨	೪೦೯೪೪	೬	೬	–
	ಒಟ್ಟು	೧೬೫೩೫೪೨	೩೬೧೨೭೮	೧೧೦೧೭೫೧	೧೪೭	೧೦೦	೪೭

ಚುಕ್ಕೆ ಗುರುತ್ತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.–ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳ ತಿಳಿನೇ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಮಂಡಿಸಲಾಯಿತು